CDF

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಕಾಲೇಜುಗಳ ನಿರ್ವಹಣೆಗಾಗಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾಗುತ್ತಿರುವ ಅಭಿವೃದ್ಧಿ ಶುಲ್ಕದ ಮೊತ್ತವನ್ನು ಜಮಾ : ಖರ್ಚು ಮಾಡುವ ಕುರಿತು.

ಓದಲಾಗಿದೆ: 1) ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ: ಡಿಸಿಇ-108-ಎಂಎಸ್ಎಲ್-2001 ಎಡಿಎಂ ದಿನಾಂಕ: 12-4-2001, 29-6-2001 ಮತ್ತು 23-8-2001.

2) ಮಹಾಲೇಖಪಾಲರ ಪತ್ರ ಸಂಖ್ಯೆ: ಟಿಎಪಿ-II:ಡಿ3:2002-03-27 ದಿನಾಂಕ: 16-8-2002.

—::—

ಪ್ರಸ್ತಾವನೆ :

ಸರ್ಕಾರಿ ಕಾಲೇಜುಗಳ ನಿರ್ವಹಣೆಗಾಗಿ ವಿದ್ಯಾರ್ಥಿಗಳಿಂದ ಅಭಿವೃದ್ಧಿ ಶುಲ್ಕದ ರೂಪದಲ್ಲಿ ವಸೂಲಿ ಮಾಡಲಾಗುತ್ತಿರುವ ಮೊತ್ತವನ್ನು ಪ್ರಾಂಶುಪಾಲರ ಮುಖಾಂತರ ಖಜಾನೆಯ ಪಿ.ಡಿ. ಖಾತೆಯಲ್ಲಿ ಜಮಾ ಮಾಡಿ ಕಾಲೇಜು ಅಭಿವೃದ್ಧಿ ನಿರ್ವಹಣೆಗಾಗಿ ಉಪಯೋಗಿಸಿಕೊಳ್ಳುವ ಕುರಿತು ಕಾಲೇಜು ಶಿಕ್ಷಣ ಆಯುಕ್ತರು ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 12-4-2001ರ ಪತ್ರದಲ್ಲಿ ಪ್ರಸ್ತಾಪಿಸಿದ್ದರು. ಮಹಾಲೇಖಪಾಲರೊಡನೆ ಸಮಾಲೋಚಿಸಲಾಗಿ, ಕ್ರಮಾಂಕ(2)ರಲ್ಲಿ ಓದಲಾದ ದಿನಾಂಕ: 16-8-2002ರ ಪತ್ರದಲ್ಲಿ ಮಹಾಲೇಖಪಾಲರು ಈ ಕೆಳಕಂಡಂತೆ ಅಭಿಪ್ರಾಯಿಸಿದ್ದಾರೆ.

" It has been observed that Education P.D.Accounts to accommodate transactions relating to R.R. and Library fees held by heads of Educational Institutions are in operation in many Treasuries. Instead of allowing Personal Deposit Accounts to be opened a new, the scope of these educational P.D. accounts under the head of account "8443-123-Deposits" of Educational Institutions may be extended to cover the intended "College development fees" also. Government may lay down detailed rules and regulations, procedures and guidelines regarding accounting and administration of these Education P.D.Accounts proposed to deal with the transactions of the intended collection of college development fee from every student to ensure accountability, transparancy and to bring them under the perview of audit."

ಕಾಲೇಜು ಶಿಕ್ಷಣ ಆಯುಕ್ತರ ಪ್ರಸ್ತಾವನೆ ಹಾಗೂ ಮಹಾಲೇಖಪಾಲರ ಅಭಿಪ್ರಾಯವನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಇಡಿ 89 ಯುಜಿಸಿ 2001, ಬೆಂಗಳೂರು ದಿನಾಂಕ: 13-01-2003

ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿರುವ 'ಅಭಿವೃದ್ಧಿ ಶುಲ್ಕ' ರೂ. 100-00ಗಳನ್ನು ಸಹ, ಇತರೆ ಶುಲ್ಕಗಳನ್ನು ಜಮಾ ಮಾಡಲು ಖಜಾನೆಗಳಲ್ಲಿ ಲೆಕ್ಕ ಶೀರ್ಷಿಕೆ "8443-123-ಠೇವಣಿಗಳು" ಇದರಡಿಯಲ್ಲಿ ಈಗಾಗಲೇ ತೆರೆಯಲಾಗಿರುವ ಪಿ.ಡಿ. ಅಕೌಂಟ್ಸ್‌ನಲ್ಲಿಯೇ ಜಮಾ ಮಾಡಲು ಆದೇಶಿಸಲಾಗಿದೆ. ಈ ಮೊತ್ತವನ್ನು ಕಾಲೇಜು ಅಭಿವೃದ್ಧಿ ಕೆಲಸಗಳಿಗಾಗಿಯೇ

— — — 2

ಉಪಯೋಗವಾಗುವಂತೆ ನೋಡಿಕೊಂಡು ಲೆಕ್ಕಪತ್ರಗಳನ್ನು ನಿರ್ವಹಿಸಲು

1. ಕಾಲೇಜಿನ ಪ್ರಾಂಶುಪಾಲರು
2. ಕಾಲೇಜಿನಲ್ಲಿ ಸೇವಾ ಹಿರಿತನ ಹೊಂದಿರುವ 2 ಮಂದಿ ಉಪನ್ಯಾಸಕರು
3. ವಿದ್ಯಾರ್ಥಿಗಳ ಪ್ರತಿನಿಧಿ

ಇವರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು. ಕಾಲೇಜು ಅಭಿವೃದ್ಧಿಗಾಗಿ ವಸೂಲಿಯಾದ ಮೊತ್ತವನ್ನು ವಿದ್ಯಾರ್ಥಿಗಳಿಗೆ ನೇರವಾಗಿ ಉಪಯೋಗವಾಗುವ ಕೆಲಸಗಳಿಗೆ ಸಮಿತಿಯ ಅನುಮೋದನೆ ಪಡೆದು ವಿನಿಯೋಗ ಮಾಡತಕ್ಕದ್ದು. ಉದಾಹರಣಾತ್ಮಕವಾಗಿ ಈ ಕೆಳಕಂಡ ಬಾಬ್ತುಗಳು ನೀಡಿದೆ.

1) ಗ್ರಂಥಾಲಯ ಪುಸ್ತಕಗಳು, ಜರ್ನಲ್ಸ್, ಇಂಡೆಕ್ಸಿಂಗ್ ಮತ್ತು ಕ್ಯಾಟಲಾಗಿಂಗಗಳನ್ನು ಖರೀದಿಸುವುದು ಮತ್ತು ಬೈಂಡ್ ಮಾಡುವುದು.
2) ಕಾಲೇಜುಗಳಿಗೆ ಲೇಖನ ಸಾಮಗ್ರಿಗಳನ್ನು ಖರೀದಿಸುವುದು (ಉದಾ: ಸೀಮೆಸುಣ್ಣ, ಡಸ್ಟರ್ಸ್ ಇತ್ಯಾದಿಗಳು)
3) ತರಗತಿಗಳಿಗೆ ಪೀಠೋಪಕರಣಗಳು ಮತ್ತು ಡೆಸ್ಕಗಳನ್ನು ಖರೀದಿಸುವುದು.
4) ಪ್ರಯೋಗಾಲಯ ಸಾಮಗ್ರಿಗಳು ಗ್ರೀನಬೋರ್ಡ್‌ಗಳನ್ನು ಖರೀದಿಸುವುದು: ದುರಸ್ತಿಗೊಳಿಸುವುದು ಮತ್ತು ಪ್ರಯೋಗಾಲಯದ ಸಣ್ಣಪುಟ್ಟ ದುರಸ್ತಿಗಳು.
5) ಗಣಕಯಂತ್ರ, ಜೆರಾಕ್ಸ್ ಯಂತ್ರ ಮತ್ತು ಬಹುಪ್ರತಿ ಯಂತ್ರ ಇವುಗಳ ಸಣ್ಣಪುಟ್ಟ ದುರಸ್ತಿಗಳು ಮತ್ತು ವಾರ್ಷಿಕ ನಿರ್ವಹಣೆಯ ಗುತ್ತಿಗೆ.
6) ತರಗತಿಗಳ : ಪ್ರಯೋಗಾಲಯಗಳಿಗೆ ಮಾತ್ರ ಸಂಬಂಧಿಸಿದಂತೆ, ಪೀಠೋಪಕರಣಗಳ ಸಣ್ಣ ಪುಟ್ಟ ದುರಸ್ತಿ.
7) ತರಗತಿಗಳ : ಪ್ರಯೋಗಾಲಯಗಳಿಗೆ ವಿದ್ಯುತ್ ದುರಸ್ತಿ.
8) ಸಿವಿಲ ಕಾಮಗಾರಿಗಳ ಸಣ್ಣಪುಟ್ಟ ದುರಸ್ತಿಗಳು ಮತ್ತು ಬದಲಾಯಿಸುವಿಕೆ (ಉದಾ: ಟ್ಯಾಪ್ಸ್, ಒಳಚರಂಡಿ, ಸುಣ್ಣ-ಬಣ್ಣ, ಕಪ್ಪು ಹಲಗೆ, ಕಿಟಕಿಗಳು ಇತ್ಯಾದಿಗಳು)

ಇದನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 754 ವೆಚ್ಚ-8:2001 ದಿನಾಂಕ 4-3-2001 ರಲ್ಲಿ ನೀಡಿದ ಸಮ್ಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್. ಬಸವರಾಜು)
ಸರ್ಕಾರದ ಅಪರ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ-೧೦೮-ಇತರೆ-೨೦೦೧-ಅ.ವಿ:ಶೈ.ವಿ.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: ೨೪-೧೧-೨೦೦೩

ಮೇಲ್ಕಂಡ ಸರ್ಕಾರಿ ಆದೇಶವನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಜಂಟಿ ನಿರ್ದೇಶಕರು

<u>ಇವರಿಗೆ:</u>

೧) ಎಲ್ಲಾ ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರ ಕಛೇರಿಗಳಿಗೆ.
೨) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ.
೩) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ.
೪) ಮಾಹಿತಿ ಅಧಿಕಾರಿಗಳಿಗೆ